# ಶುಭವಾರ್ತೆ ಕಥಾಪುಸ್ತಕ

## ಆರು



ಇದು ನನ್ನ ಶುಭವಾರ್ತೆ ಆರನೆ ಕಥಾಪುಸ್ತಕ

ನನ್ನ ಹೆಸರು

---

ನನ್ನ ಶುಭವಾರ್ತೆ ಆರನೆ
ಕಥಾಪುಸ್ತಕವನ್ನು ನಾನು ಓದಬಲ್ಲೆ

ಈ ಕಥೆಗಳನ್ನು ಸೃಷ್ಟಿಕರ್ತನಾದ ದೇವರ ಪವಿತ್ರ ಪುಸ್ತಕದಿಂದ ಆರಿಸಿಕೊಳ್ಳಲಾಗಿದೆ.

ಈ ಕಥಾಪುಸ್ತಕದಲ್ಲಿರುವ ಎಲ್ಲ ಚಿತ್ರಗಳನ್ನು ಭಾರತದ ಬುಡಕಟ್ಟು ಮಕ್ಕಳು ಬರೆದಿದ್ದಾರೆ.
ಶುಭವಾರ್ತೆ ಕಥಾಪುಸ್ತಕ ಆರು. ಕಾಪಿರೈಟ್ 2017. ಪ್ರಿಂಟೆಡ್ ಇನ್ ಇಂಡಿಯಾ. ಹೆಚ್ಚಿನ ವಿಷಯಗಳಿಗಾಗಿ ಸಂಪರ್ಕಿಸಿ:
WBTC India, P.O. Box 8478, Bangalore 560084. Email: info@wbtcindia.com



ಯೇಸು ಗುಣಪಡಿಸುವನು ........................ 2-15
ನನಗೆ ಬಿಡುಗಡೆ ಆಯಿತು ........................ 16-21
ಯೇಸು ಕಾಪಾಡುವನು ........................ 22-34
ಯೇಸು ಜೀವಿಸುತ್ತಿದ್ದಾನೆ ..................... 36-40

# ಯೇಸು ಗುಣಪಡಿಸುವನು

ಮತ್ತೊಂದು ದಿನ, ಮತ್ತೊಂದು ಸಮಯ,
ಮತ್ತೊಂದು ಸ್ಥಳ.

ನನಗೆ ಒಬ್ಬ ಚಿಕ್ಕ ಬಾಲಕಿ ಕಾಣುತ್ತಿದ್ದಾಳೆ.

ಚಿಕ್ಕ ಬಾಲಕಿಗೆ ಹನ್ನೆರಡು ವರ್ಷ.

ಚಿಕ್ಕ ಬಾಲಕಿಗೆ ತುಂಬ, ತುಂಬ,
ತುಂಬ ಹುಷಾರಿಲ್ಲ.

ಚಿಕ್ಕ ಬಾಲಕಿ ಸತ್ತುಹೋಗುತ್ತಿದ್ದಾಳೆ!







ಚಿಕ್ಕ ಬಾಲಕಿಗೆ ತಂದೆ ಇದ್ದಾನೆ.

ಅವನ ಹೆಸರು ಯಾಯಿರ.

ಯಾಯಿರನು ಊರಿಗೆ ಹೋಗುತ್ತಿರುವುದು
ನನಗೆ ಕಾಣುತ್ತಿದೆ.

ಬೇಗನೆ...ಬೇಗನೆ...ಬೇಗನೆ...
ನಿನ್ನ ಚಿಕ್ಕ ಬಾಲಕಿ
ಸತ್ತುಹೋಗುತ್ತಿದ್ದಾಳೆ!

ಯಾಯಿರನು ಯೇಸುವಿನ ಪಾದಗಳಿಗೆ
ಅಡ್ಡಬೀಳುತ್ತಿರುವುದು ನನಗೆ ಕಾಣುತ್ತಿದೆ.

ಯಾಯಿರನು ಯೇಸುವಿಗೆ ಹೀಗೆ
ಹೇಳುತ್ತಿರುವುದು ನನಗೆ ಕೇಳಿಸುತ್ತಿದೆ:

‘ದಯವಿಟ್ಟು ನನ್ನ ಮನೆಗೆ ಬಾ.
ನನ್ನ ಚಿಕ್ಕ ಮಗಳು ಸತ್ತುಹೋಗುತ್ತಿದ್ದಾಳೆ.

ಆಕೆಯನ್ನು ಮುಟ್ಟು, ಆಗ
ಆಕೆಗೆ ಗುಣವಾಗುವುದು.

ಆಕೆಯನ್ನು ಮುಟ್ಟು, ಆಗ ಆಕೆ ಬದುಕುವಳು.’








ಯೇಸು ಮತ್ತು ಯಾಯಿರ ನಡೆದುಕೊಂಡು
ಯಾಯಿರನ ಮನೆಗೆ ಹೋಗುತ್ತಿರುವುದು
ನನಗೆ ಕಾಣುತ್ತಿದೆ.

ತಾಳಿಕೋ ಚಿಕ್ಕ ಬಾಲಕಿ, ಸೃಷ್ಟಿಕರ್ತನಾದ
ದೇವರು ಬರುತ್ತಿದ್ದಾನೆ...

ಈಗ ನನಗೆ ಒಬ್ಬ ಸ್ತ್ರೀ ಕಾಣುತ್ತಿದ್ದಾಳೆ.

ಆಕೆಗೆ ತುಂಬ ಹುಷಾರಿಲ್ಲ.
ಆಕೆಯು ತಿರಸ್ಕರಿಸಲ್ಪಟ್ಟವಳು.

ತುಂಬ ಹುಷಾರಿಲ್ಲದ ಆಕೆ ತನಗೆ
ತಾನೇ ಹೀಗೆ ಹೇಳಿಕೊಳ್ಳುತ್ತಿರುವುದು
ನನಗೆ ಕೇಳಿಸುತ್ತಿದೆ:

'ನಾನು ಯೇಸುವನ್ನು ಮುಟ್ಟಿದರೆ,
ನನಗೆ ಗುಣವಾಗುತ್ತದೆ.'







ಆಗ ಇದಾಯಿತು...

ತುಂಬ ಹುಷಾರಿಲ್ಲದ ಆಕೆ
ಯೇಸುವನ್ನು ಮುಟ್ಟಿದಳು!

ಯೇಸು ನಡೆಯದೆ ನಿಂತದ್ದು ನನಗೆ ಕಾಣುತ್ತಿದೆ.

ಯೇಸು ಹೀಗೆ ಹೇಳುತ್ತಿರುವುದು ನನಗೆ
ಕೇಳಿಸುತ್ತಿದೆ: ‘ನನ್ನನ್ನು ಯಾರು ಮುಟ್ಟಿದರು?’








ಅನೇಕರು ಕೇಳಿಸಿಕೊಳ್ಳುತ್ತಾ...
ಕೇಳಿಸಿಕೊಳ್ಳುತ್ತಾ...ಕೇಳಿಸಿಕೊಳ್ಳುತ್ತಾ ಇದ್ದಾರೆ.

ತುಂಬ ಹುಷಾರಿಲ್ಲದ ಆಕೆ ಹೀಗೆ
ಹೇಳುತ್ತಿರುವುದು ನನಗೆ ಕೇಳಿಸುತ್ತಿದೆ:

‘ಯೇಸುವಿನ ಒಂದೇ ಸ್ಪರ್ಶದಿಂದ
ನನಗೆ ಗುಣವಾಯಿತು!’







ತಾಳಿಕೋ ಚಿಕ್ಕ ಬಾಲಕಿ, ಸೃಷ್ಟಿಕರ್ತನಾದ
ದೇವರು ಬರುತ್ತಿದ್ದಾನೆ...

ಆಗ ಇದಾಯಿತು...





ಒಬ್ಬ ವ್ಯಕ್ತಿ ಯಾಯಿರನಿಗೆ ಹೀಗೆ
ಹೇಳುತ್ತಿರುವುದು ನನಗೆ ಕೇಳಿಸುತ್ತಿದೆ:
‘ನಿನ್ನ ಚಿಕ್ಕ ಬಾಲಕಿ ಸತ್ತುಹೋದಳು.’

ಯೇಸುವು ಯಾಯಿರನಿಗೆ ಹೀಗೆ
ಹೇಳುತ್ತಿರುವುದು ನನಗೆ ಕೇಳಿಸುತ್ತಿದೆ:

‘ದುಃಖಪಡಬೇಡ, ನಾನು ಯೇಸು.

ನಿನ್ನ ಚಿಕ್ಕ ಬಾಲಕಿ ಬದುಕುವಳು!’

ಯೇಸು ಮತ್ತು ಯಾಯಿರ ನಡೆದುಕೊಂಡು
ಯಾಯಿರನ ಮನೆಯೊಳಗೆ ಹೋಗುತ್ತಿರುವುದು
ನನಗೆ ಕಾಣುತ್ತಿದೆ.

ಸತ್ತುಹೋದ ಬಾಲಕಿಗೆ ಯೇಸು ಹೀಗೆ
ಹೇಳುತ್ತಿರುವುದು ನನಗೆ ಕೇಳಿಸುತ್ತಿದೆ:

‘ಚಿಕ್ಕ ಬಾಲಕಿ, ಎದ್ದೇಳು!’

ಚಿಕ್ಕ ಬಾಲಕಿ ಎದ್ದೇಳುತ್ತಿರುವುದು
ನನಗೆ ಕಾಣುತ್ತಿದೆ!

ಚಿಕ್ಕ ಬಾಲಕಿ ಬದುಕಿಕೊಂಡಳು!







ಯೇಸು ಸದಾಕಾಲ ಮತ್ತು ಎಂದೆಂದಿಗೂ
ಜೀವವಾಗಿದ್ದಾನೆ.

ಕತ್ತಲೆಯನ್ನು ಹಿಂದಕ್ಕೆ ತಳ್ಳಲು
ಯೇಸುವಿಗೆ ಮಾತ್ರ ಶಕ್ತಿಯಿದೆ.

ಸೃಷ್ಟಿಕರ್ತನಾದ ದೇವರು ಇಲ್ಲಿದ್ದಾನೆ!

# ನನಗೆ ಬಿಡುಗಡೆ ಆಯಿತು

ಮತ್ತೊಂದು ದಿನ, ಮತ್ತೊಂದು ಸಮಯ,
ಮತ್ತೊಂದು ಸ್ಥಳ.

ಯೇಸು ಮತ್ತು ಆತನ ಶಿಷ್ಯರು
ನದಿಯ ಆಚೆದಡಕ್ಕೆ ಹೋಗುತ್ತಿರುವುದು
ನನಗೆ ಕಾಣುತ್ತಿದೆ.

ಹಂದಿಗಳು ನದಿಯ ಬಳಿ ನಿಂತಿರುವುದು
ನನಗೆ ಕಾಣುತ್ತಿದೆ.







ಅಲ್ಲಿ ಒಬ್ಬ ವ್ಯಕ್ತಿ ಇರುವುದು
ನನಗೆ ಕಾಣುತ್ತಿದೆ.

ಆ ವ್ಯಕ್ತಿಯೊಳಗೆ ಅನೇಕ
ಕೆಟ್ಟ ಆತ್ಮಗಳಿವೆ.

ಆ ವ್ಯಕ್ತಿಯೊಳಗೆ ಇರುವ ಅನೇಕ
ಕೆಟ್ಟ ಆತ್ಮಗಳಿಗೆ ಯೇಸು ಹೀಗೆ
ಹೇಳುತ್ತಿರುವುದು ನನಗೆ ಕೇಳಿಸುತ್ತಿದೆ:

‘ಈ ವ್ಯಕ್ತಿಯೊಳಗಿಂದ ಹೊರಬಂದು ನದಿಯ
ಬಳಿ ನಿಂತಿರುವ ಹಂದಿಗಳ ಒಳಗೆ ಹೋಗಿ.’

ಆ ವ್ಯಕ್ತಿಯೊಳಗಿಂದ ಅನೇಕ ಕೆಟ್ಟ ಆತ್ಮಗಳು ಹೊರಬಂದು ನದಿಯ ಬಳಿ ನಿಂತಿರುವ ಹಂದಿಗಳ ಒಳಗೆ ಹೋಗುತ್ತಿರುವುದು ನನಗೆ ಕಾಣುತ್ತಿದೆ.

ಹಂದಿಗಳು ನದಿಯೊಳಕ್ಕೆ ಓಡಿಹೋಗುತ್ತಿರುವುದು ನನಗೆ ಕಾಣುತ್ತಿದೆ.

ಹಂದಿಗಳು ಸತ್ತುಹೋದವು.







ಒಬ್ಬ ವ್ಯಕ್ತಿ ಯೇಸುವಿಗೆ ಹಾಡುತ್ತಿರುವುದು ನನಗೆ ಕೇಳಿಸುತ್ತಿದೆ.

ಯೇಸು ಆ ವ್ಯಕ್ತಿಗೆ ಹೀಗೆ ಹೇಳುತ್ತಿರುವುದು ನನಗೆ ಕೇಳಿಸುತ್ತಿದೆ:

‘ಹೋಗು, ಸೃಷ್ಟಿಕರ್ತನು ನಿನಗೆ ಮಾಡಿರುವುದನ್ನು ಎಲ್ಲ ಜನರಿಗೆ ತಿಳಿಸು.’

ಆ ವ್ಯಕ್ತಿಯು ಎಲ್ಲ ಜನರಿಗೆ ಹೀಗೆ
ಹೇಳುತ್ತಿರುವುದು ನನಗೆ ಕೇಳಿಸುತ್ತಿದೆ:

‘ಯೇಸು ಕೆಟ್ಟ ಆತ್ಮಗಳಿಗೆ ನನ್ನೊಳಗಿಂದ
ಹೊರಬರಲು ಹೇಳಿದನು.

ಕೆಟ್ಟ ಆತ್ಮಗಳು ನನ್ನೊಳಗಿಂದ
ಹೊರಬಂದವು.

ಯೇಸು ನನ್ನನ್ನು ಬಿಡುಗಡೆ ಮಾಡಿದನು.’







ಯೇಸು ಲೋಕಕ್ಕೆ
ಬೆಳಕಾಗಿದ್ದಾನೆ.

ಕತ್ತಲೆಯನ್ನು ಹಿಂದಕ್ಕೆ ತಳ್ಳಲು
ಯೇಸುವಿಗೆ ಮಾತ್ರ ಶಕ್ತಿಯಿದೆ.

ಸೃಷ್ಟಿಕರ್ತನಾದ ದೇವರು ಇಲ್ಲಿದ್ದಾನೆ!

# ಯೇಸು ಕಾಪಾಡುವನು

ಕಾಲವಾಯಿತು.

ಈ ರಾತ್ರಿ ಕತ್ತಲಾಗಿದೆ...ತುಂಬ,
ತುಂಬ, ತುಂಬ ಕತ್ತಲಾಗಿದೆ.





ಯೇಸು ತನ್ನ ಹಿಂಬಾಲಕರಿಗೆ ಹೀಗೆ
ಹೇಳುತ್ತಿರುವುದು ನನಗೆ ಕೇಳಿಸುತ್ತಿದೆ:


‘ನೀವು ಮಾಡಿದ ಎಲ್ಲ ಕೆಟ್ಟವುಗಳಿಗಾಗಿ
ನನ್ನ ಪ್ರಾಣವನ್ನು ರಕ್ತದ ಯಜ್ಞವನ್ನಾಗಿ
ಕೊಡತಕ್ಕ ಸಮಯ ಇದಾಗಿದೆ.

ನಿಮಗಾಗಬೇಕಾದ ಶಿಕ್ಷೆಯನ್ನು
ನಾನು ತೆಗೆದುಕೊಳ್ಳುತ್ತೇನೆ.
ನಾನು ಕತ್ತಲೆಯನ್ನು ಹಿಂದಕ್ಕೆ
ತಳ್ಳಿಬಿಡುವೆನು.

ನಾನು ನಿಮ್ಮನ್ನು ಸದಾಕಾಲ ಮತ್ತು
ಎಂದೆಂದಿಗೂ ಕಾಪಾಡುವೆನು.’

ಕಾಲವಾಯಿತು.

ಸೈನಿಕರು ಯೇಸುವನ್ನು ಶಿಲುಬೆಗೆ ಮೊಳೆಗಳಿಂದ ಜಡಿಯುತ್ತಿರುವುದು ನನಗೆ ಕಾಣುತ್ತಿದೆ.








ಯೇಸುವಿನ ರಕ್ತವು ನೆಲಕ್ಕೆ ಬೀಳುತ್ತಾ... ಬೀಳುತ್ತಾ...ಬೀಳುತ್ತಾ ಇರುವುದು ನನಗೆ ಕಾಣುತ್ತಿದೆ.

ಶಿಲುಬೆಯ ಮೇಲೆ ತೂಗಾಡುತ್ತಿರುವ ಯೇಸು
ನನಗೆ ಕಾಣುತ್ತಿದ್ದಾನೆ.


ಯೇಸು ಹೀಗೆ ಹೇಳುತ್ತಿರುವುದು
ನನಗೆ ಕೇಳಿಸುತ್ತಿದೆ:

‘ನಾನು ನಿಮ್ಮನ್ನು ಇನ್ನೂ ಪ್ರೀತಿಸುತ್ತೇನೆ.
ನಾನು ನಿಮ್ಮನ್ನು ಕಾಪಾಡುತ್ತೇನೆ.

ನೀವು ನನ್ನನ್ನು ಕಂಡುಕೊಳ್ಳುವಿರಿ.
ನಾನು ನಿಮ್ಮನ್ನು ಕ್ಷಮಿಸುತ್ತೇನೆ. ನಾನು ನಿಮಗೆ
ನನ್ನ ಪ್ರಾಣವನ್ನು ಕೊಡುತ್ತೇನೆ.’








ಯೇಸು ಸತ್ತಿರುವುದು ನನಗೆ ಕಾಣುತ್ತಿದೆ.


ಈ ದಿನ ಕತ್ತಲಾಗಿದೆ...ತುಂಬ, ತುಂಬ,
ತುಂಬ ಕತ್ತಲಾಗಿದೆ.

ಯೇಸುವಿನ ಶಿಷ್ಯರು ಆತನ ಮೃತ ದೇಹವನ್ನು
ಸಮಾಧಿಗೆ ಒಯ್ಯುತ್ತಿರುವುದು
ನನಗೆ ಕಾಣುತ್ತಿದೆ.

ಯೇಸುವಿಗೆ ಸಮಾಧಿ ಆಯಿತು.








ಕಾಲವಾಯಿತು.

ಯೇಸುವಿನ ಸಮಾಧಿ ಬರಿದಾಗಿರುವುದು
ನನಗೆ ಕಾಣುತ್ತಿದೆ!

ಯೇಸುವಿನ ದೇಹ ಎಲ್ಲಿದೆ?





ಒಳ್ಳೆಯ ಆತ್ಮನು ಯೇಸುವಿನ ಶಿಷ್ಯರಿಗೆ
ಹೀಗೆ ಹೇಳುತ್ತಿರುವುದು
ನನಗೆ ಕೇಳಿಸುತ್ತಿದೆ:

‘ಯೇಸು ಸದಾಕಾಲ ಮತ್ತು
ಎಂದೆಂದಿಗೂ ಜೀವಿಸುವನು!’

ನನಗೆ ಯೇಸು ಕಾಣುತ್ತಿದ್ದಾನೆ.
ಆತನು ಜೀವಿಸುತ್ತಿದ್ದಾನೆ!








ಯೇಸು ತನ್ನ ಹಿಂಬಾಲಕರಿಗೆ ಹೀಗೆ
ಹೇಳುತ್ತಿರುವುದು ನನಗೆ ಕೇಳಿಸುತ್ತಿದೆ:

‘ಹೋಗಿ ಎಲ್ಲ ಕುಲಗಳವರಿಗೆ,
ಎಲ್ಲಕಡೆಯಿರುವ ಎಲ್ಲ ಜನರಿಗೆ
ಶುಭವಾರ್ತೆ ತಿಳಿಸಿರಿ!

ನಾನು ನಿಮ್ಮನ್ನು ಪ್ರೀತಿಸುತ್ತೇನೆ.
ನಿಮ್ಮನ್ನು ಸದಾಕಾಲ ಮತ್ತು ಎಂದೆಂದಿಗೂ
ಕಾಪಾಡಲು ನಾನು ಸತ್ತೆನು,
ಆದರೂ ಜೀವಿಸುತ್ತಿದ್ದೇನೆ.’

ಯೇಸು ಆಕಾಶದೊಳಕ್ಕೆ ಏರಿ...ಏರಿ...ಏರಿ
ಹೋಗುತ್ತಿರುವುದು ನನಗೆ ಕಾಣುತ್ತಿದೆ.





# ಯೇಸು ಜೀವಿಸುತ್ತಿದ್ದಾನೆ

ಅನೇಕ ವರ್ಷಗಳು ಕಳೆದವು.

ಒಬ್ಬ ಮನುಷ್ಯ ನನಗೆ ಕಾಣುತ್ತಿದ್ದಾನೆ.

ಅವನ ಹೆಸರು ಯೋಹಾನ.

ಯೋಹಾನನು ಹೀಗೆ ಹೇಳುತ್ತಿರುವುದು ನನಗೆ ಕೇಳಿಸುತ್ತಿದೆ:

'ಯೇಸು ಆಕಾಶದ ಮೇಲಿರುವುದು ನನಗೆ ಕಾಣುತ್ತಿದೆ. ಆತನ ಕಣ್ಣುಗಳು ಬೆಂಕಿಯಂತಿವೆ!'







ಯೇಸು ಬಿಳಿಕುದುರೆಯ ಮೇಲೆ ಬರುತ್ತಿರುವುದು ನನಗೆ ಕಾಣುತ್ತಿದೆ.

ಆತನ ಹೆಸರು ದೇವರ ವಾಕ್ಯ.

ಯೇಸುವಿನ ನಿಲುವಂಗಿಯ ಮೇಲಿರುವ ಪದಗಳು ನನಗೆ ಕಾಣುತ್ತಿವೆ,

**ರಾಜರುಗಳಿಗೆ ರಾಜ ಮತ್ತು ಪ್ರಭುಗಳಿಗೆ ಪ್ರಭು!**

ಎಲ್ಲ ಕುಲಗಳ ಜನರು ಯೇಸುವಿಗೆ
ಹಾಡುತ್ತಿರುವುದು ನನಗೆ ಕಾಣುತ್ತಿದೆ.

ಎಲ್ಲ ಆತ್ಮಗಳು ಯೇಸುವಿಗೆ
ಹಾಡುತ್ತಿರುವುದು ನನಗೆ ಕಾಣುತ್ತಿದೆ.

ಪ್ರತಿಯೊಂದು ಯೇಸುವಿಗೆ
ಹಾಡುತ್ತಿರುವುದು ನನಗೆ ಕಾಣುತ್ತಿದೆ.







ಸೃಷ್ಟಿಕರ್ತನಾದ ದೇವರು ಹೀಗೆ
ಹೇಳುತ್ತಿರುವುದು ನನಗೆ ಕೇಳಿಸುತ್ತಿದೆ:

‘ನನ್ನ ಜನರು ಸದಾಕಾಲ ಮತ್ತು
ಎಂದೆಂದಿಗೂ ಕಾಪಾಡಲ್ಪಟ್ಟಿದ್ದಾರೆ.

ಮರಣವಿಲ್ಲ. ಕಣ್ಣೀರಿಲ್ಲ.

ದುಃಖವಿಲ್ಲ. ನೋವಿಲ್ಲ.

ನಾನು ಪ್ರತಿಯೊಂದನ್ನು
ಹೊಸದನ್ನಾಗಿ ಮಾಡಿರುವೆ.’

ಯೇಸು ಹೀಗೆ ಹೇಳುತ್ತಿರುವುದು
ನನಗೆ ಕೇಳಿಸುತ್ತಿದೆ:

‘ನೋಡಿ, ನಾನು ಬೇಗನೆ ಹಿಂತಿರುಗಿ ಬರುತ್ತೇನೆ.

ನಾನು ನಿತ್ಯಕಾಲ ಇರುವಾತನು. ನಾನು
ಯೇಸು. ನಾನು ನಿಮ್ಮನ್ನು ಪ್ರೀತಿಸುತ್ತೇನೆ.

ನಾನು ನಿಮ್ಮನ್ನು ಸದಾಕಾಲ ಮತ್ತು
ಎಂದೆಂದಿಗೂ ಕಾಪಾಡಿದ್ದೇನೆ.’

